ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821-2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

Company Identity Number (CIN):U40109KA2004SGC035177

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2023-24/CYS- 132 ದಿನಾಂಕ: 08 JAN 2024

## ಜನ ಸಂಪರ್ಕ ಸಭೆಯ ನಡಾವಳ

ದಿನಾಂಕ:20-12-2023 ರಂದು ಗೋಣಿಕೊಪ್ಪಲು ಉಪ-ವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ)ರವರ ನೇತೃತ್ವದಲ್ಲಿ ನಡೆದ **ಜನ ಸಂಪರ್ಕ** ಸಭೆಯಲ್ಲಿ ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ನಿವೇದಿಸಿಕೊಂಡ ದೂರುಗಳು ಮತ್ತು ಅವುಗಳ ಇತ್ಯರ್ಥಕ್ಕೆ ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ ಸೋಮಶೇಕರ್, ಅಧೀಕ್ಷಕ ಇಂಜಿನಿಯರ್(ವಿ), ಚಾ-ಕೊಡಗು ವೃತ್ತ, ಮೈಸೂರು.
2. ಶ್ರೀಮತಿ ಅನಿತಾ ಬಾಯ್, .ಕಾ.ನಿ.ಇಂ(ಕ), ಕಾರ್ಯ ಮತ್ತು ಪಾಲನಾ ವಿಭಾಗ ಮಡಿಕೇರಿ.
3. ಶ್ರೀ ಪಿ.ಎನ್. ಸುರೇಶ್, ಸ.ಕಾ.ನಿ.ಇಂ(ಕ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಗೋಣಿಕೊಪ್ಪಲು.
4. ಶ್ರೀ ಕೆ. ಆರ್. ಸುನಿ, ಹಿರಿಯ ಸಹಾಯಕ, ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಗೋಣಿಕೊಪ್ಪಲು.
5. ಶ್ರೀ ಹೇಮಂತ್ ಕುಮಾರ್ ಬಿ.ಪಿ, ಶಾಖಾಧಿಕಾರಿ, ಗೋಣಿಕೊಪ್ಪಲು ಶಾಖೆ.
6. ಶ್ರೀ ನಾಗೇಂದ್ರ ಪ್ರಸಾದ್, ಶಾಖಾಧಿಕಾರಿ, ಶ್ರೀಮಂಗಲ ಶಾಖೆ.
7. ಶ್ರೀ ಎಮ್. ಆರ್. ರಂಗಸ್ವಾಮಿ, ಶಾಖಾಧಿಕಾರಿ, ಬಾಳೆಲೆ ಶಾಖೆ.

ಅದೀಕ್ಷಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲರನ್ನು ಸ್ವಾಗತಿಸಿ ಸ್ಥಳೀಯ ಅಧಿಕಾರಿಗಳನ್ನೊಳಗೊಂಡಂತೆ ಜನ ಸಂಪರ್ಕ ಸಭೆ ಆಯೋಜಿಸಿ ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಸಭೆಯನ್ನು ನಡೆಸಲಾಗುತ್ತಿದ್ದು ವಿದ್ಯುತ್ ಸರಬರಾಜು, ನಿರ್ವಹಣೆ ಹಾಗು ಇನ್ನಿತರ ಸಮಸ್ಯೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಸಭೆಗೆ ಮಂಡಿಸುವಂತೆ ಕೋರಿದರು ಹಾಗು ಸದರಿ ಸಮಸ್ಯೆಗಳಿಗೆ ಆಧ್ಯತೆ ಮೇಲೆ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

**ಸಭೆಯಲ್ಲಿ ಗೋಣಿಕೊಪ್ಪ ಉಪವಿಭಾಗಕ್ಕೆ ಸಂಬಂಧಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಕೆಳಗಿನಂತಿರುತ್ತವೆ.**

| ಕ್ರ. ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡ ಕ್ರಮ. |
|---|---|---|---|
| 1 | ಸೋಮಯ್ಯ ಬೆಸಗೂರು, ಬಾಳೆಲೆ ಗ್ರಾಮ (8197650888) | • BGAEH23610 ಬಿಲ್ಲು ಒಟ್ಟಿಗೆ ಬಂದಿರು ಬಗ್ಗೆ ದೂರಿದರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಆದಷ್ಟು ಬೇಗ ಸಮಸ್ಯೆ ಪರಿಹರಿಸಲು ಹಿರಿಯ ಸಹಾಯಕರಿಗೆ ಸೂಚಿಸಿದರು. |
| 2 | ಪರಶುರಾಮ್ ನೇತಾಜಿ ಬಡಾವಣೆ, ಗೋಣಿಕೊಪ್ಪಲು (9741533896) | • ನೇತಾಜಿ ಲೇಔಟ್‌ನಲ್ಲಿ ಪೌರ ಕಾರ್ಮಿಕರ ಮನೆಯ ಮೇಲೆ ವಿದ್ಯುತ್ ಮುಖ್ಯ ಮಾರ್ಗವು ಹಾದು ಹೋಗಿರುವುದನ್ನು ಕೂಡಲೇ ಸ್ಥಳಾಂತರಿಸಬೇಕು ಏನಾದರು ಅನಾಹುತ ಸಂಭವಿಸುವ ಸಾಧ್ಯತೆಇದೆ ಎಂದು ದೂರಿದರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಗೋಣಿಕೊಪ್ಪಲು ಹಾಗೂ ಕಿರಿಯ ಇಂಜಿನಿಯರ್(ವಿ) ಗೋಣಿಕೊಪ್ಪಲು ರವರಿಗೆ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಕ್ರಮ ವಹಿಸಲು ತಿಳಿಸಿರುತ್ತಾರೆ. |
| 3 | ಜೋಯಪ್ಪ ನಿಟ್ಟೂರು ಬಾಳೆಲೆ ಗ್ರಾಮ (8296451271) | • BL542 ಬಿಲ್ಲಿನಲ್ಲಿ ಅತೀಯಾದ ಮೊತ್ತ ತೋರಿಸುತ್ತಿರುವ ಬಗ್ಗೆ ಹಲವಾರು ಭಾರಿ ಪುಕಾರು ನೀಡಿದರು ಪರಿಹರಿಸದೇ ಇರುವ ಬಗ್ಗೆ ದೂರಿದರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಇದರ ಬಗ್ಗೆ ಪರಿಶೀಲನೆ ನಡೆಸಲು ಶಾಖಾಧಿಕಾರಿ ಶ್ರೀಮಂಗಲ ರವರಿಗೆ ತಿಳಿಸಿ ಹಿರಿಯ ಸಹಾಯಕರಿಗೆ ಬಿಲ್ಲಿನಲ್ಲಿ ಏನಾದರು ತೊಂದರೆಗಳಿದ್ದರೆ ಸರಿಪಡಿಸಲು ತಿಳಿಸಿದರು ಗ್ರಾಹಕರಿಗೆ ಗೃಹಜ್ಯೋತಿಯಲ್ಲಿ ನೊಂದಣಿ ಮಾಡಿಕೊಳ್ಳುವಂತೆ ಮನವಿ ಮಾಡಿದರು. |

| | | | |
|---|---|---|---|
| 4 | ಮುಕುಂದ<br>ನಾಲ್ಕೇರಿ ಗ್ರಾಮ<br>(9900481130) | • ಶ್ರೀಮಂಗಲ ಮತ್ತು ಕೋತೂರು ಮಾರ್ಗದಲ್ಲಿ ವಿದ್ಯುತ್ ಸಂಪರ್ಕ ಬರುತ್ತಿರುವುದರಿಂದ ಶಾಖಾಧಿಕಾರಿಗಳಲ್ಲಿ ಪುಕಾರು ನೀಡಿದರೆ ಶ್ರೀಮಂಗಲ ದವರು ಬಾಳೆಲೆ ಶಾಖೆಗೆ ಹೇಳಿ ಬಾಳೆಲೆ ರವರು ಶ್ರೀಮಂಗಲ ಶಾಖೆಗೆ ಹೇಳಿ ಎಂದು ತೊಂದರೆ ನೀಡುತ್ತಿರುವ ಬಗ್ಗೆ ದೂರು ನೀಡಿರುತ್ತಾರೆ. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಶ್ರೀಮಂಗಲ ಮತ್ತು ಬಾಳೆಲೆ ಶಾಖಾಧಿಕಾರಿಗಳಿಗೆ ಇದರ ಬಗ್ಗೆ ಸೂಕ್ತ ಕ್ರಮ ವಹಿಸಿ ವರದಿ ನೀಡುವಂತೆ ಕೇಳಿಕೊಂಡರು ಗ್ರಾಹಕರಿಗೆ ಯಾವುದು ಅನುಕೂಲವೋ ಆ ಲೈನ್ ನಲ್ಲಿ ಬರುವ ನಿರ್ವಹಣಾ ಸಿಬ್ಬಂದಿಗಳನ್ನು ನೇಮಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು. |
| 5 | ನಾಚಪ್ಪ<br>ನಾಲ್ಕೇರಿ ಗ್ರಾಮ, ರಿಟೈರ್ಡ್ ತಹಶಿಲ್ದಾರ್<br>(9448582586) | • ನಾಲ್ಕೇರಿ ಲೈನ್ ಕೋತೂರು ಲೈನ್ ಬರುವುದರಿಂದ ನಮಗೆ ನಾಲ್ಕೇರಿ ನಿರ್ವಹಣಾ ಸಿಬ್ಬಂದಿಗಳೆ ನಿರ್ವಹಣೆ ಮಾಡಬೇಕೆಂದು ಹೇಳಿದರು. ಮತ್ತು ತಂತಿಗಳು ಕೆಳಬಾಗದಲ್ಲಿದ್ದು ಅದನ್ನು ಸರಿಪಡಿಸಲು ಮಧ್ಯಂತರ ಕಂಬ ಅಳವಡಿಸಲು ಕೋರಿರುತ್ತಾರೆ. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ನಿಗಮದ ನಿಯಮಾನುಸಾರ ಗ್ರಾಹಕರಿಗೆ ಸೇವೆಯನ್ನು ಒದಗಿಸಲು ಸ್ಥಳ ಪರಿಶೀಲಿಸಿ ವರದಿಯನ್ನು ನೀಡುವಂತೆಯು ಹಾಗೂ ಸರಿಪಡಿಸಲು ಬಾಳೆಲೆ ಮತ್ತು ಶ್ರೀಮಂಗಲ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 6 | ಎಂ.ಎಂ. ಮಾದಯ್ಯ<br>ಕೊಳತ್ತೋಡು<br>ಬೈಗೋಡು<br>(9845033130) | • ಸದರಯವರ ತೋಟದಲ್ಲಿ ಲೈನ್ ಮನೆ ಇದ್ದು ಸ್ಥಾವರ ಸಂಖ್ಯೆ: GKGL31242 ಅಲ್ಲಿ ರೀಡಿಂಗ್ ನೀಡದೆ ಇನ್‌ವಿಸಿಬಲ್ ಎಂದು ಬಿಲ್ಲು ನೀಡುತ್ತಿರುವ ಬಗ್ಗೆ. ಒಟ್ಟಿಗೆ ಬಿಲ್ಲು ಬಂದರೆ ನಾನು ಪಾವತಿ ಮಾಡುವುದಿಲ್ಲ ಎಂದು ಹೇಳುತ್ತಾ ಅವರ ಐ.ಪಿ. ಸ್ಥಾವರ GKGIP5250 ಇದೇ ತರ ಆಗಿ ಒಟ್ಟಿಗೆ ಬಿಲ್ಲು ಬಂದಿರುವ ಬಗ್ಗೆ ಗ್ರಾಹಕರ ವೇದಿಕೆ ಮಡಿಕೇರಿಗೆ ದೂರು ನೀಡಿರುವ ಬಗ್ಗೆ ಹೇಳಿದರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಹಿರಿಯ ಸಹಾಯಕರಿಗೆ ಇದು ಬಗ್ಗೆ ಸೂಕ್ತ ಕ್ರಮವಹಿಸುವಂತೆಯು ಮಾಪಕ ಓದುಗರು ಖಡ್ಡಾಯವಾಗಿ ಸದರಿ ಜಾಗಕ್ಕೆ ಹೋಗುವಂತೆಯು ವ್ಯವಸ್ಥೆ ಮಾಡುವಂತೆ ತಿಳಿಸಿದರು. ಐ.ಪಿ. ಸ್ಥಾವರವು ಗ್ರಾಹಕರ ಕುಂದು ಕೊರತೆ ವೇದಿಕೆಯಲ್ಲಿ ಇರುವುದರಿಂದ ಆದೇಶದ ಬಗ್ಗೆ ಕಾಯುವಂತೆ ತಿಳಿಸಿದರು. |
| 7 | ಪುಟ್ಟಸ್ವಾಮಿ<br>ಕೈಕೇರಿ ಗ್ರಾಮ<br>(9448326050) | • ಐ.ಪಿ. ಸ್ಥಾವರಕ್ಕೆ ನೀರು ಹಾರಿಸುವ ಸಮಯದಲ್ಲಿ ಓಲ್ಟೇಜ್ ಸಮಸ್ಯೆ ಉಂಟಾಗಿ ನೀರು ಹಾರಿಸಲು ಸಾಧ್ಯವಾಗದೇ ಇರುವ ಬಗ್ಗೆ ಮತ್ತು ಮಾರ್ಗ ಮತ್ತು ಮಾರ್ಗದ ಲೈನುಗಳು ತೀರಾ ಶಿಥಿಲಾವಸ್ಥೆಯಲ್ಲಿರುವುದರಿಂದ ಬದಲಾವಣೆ ಮಾಡುವಂತೆ ದೂರಿದರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಸಿದ್ದಾಪುರದಲ್ಲಿ ಹೊಸದಾಗಿ 66 ಕೆ.ವಿ. ಸ್ಟೇಷನ್ ಸ್ಥಾಪನೆ ಯಾದರೆ ಓಲ್ಟೇಜ್ ಸಮಸ್ಯೆ ಬಗೆಹರಿಯುತ್ತದೆ. ಮತ್ತು ಶಿಥಿಲಾವಸ್ಥೆಯಲ್ಲಿರುವ ವಯರ್‌ಗಳನ್ನು ಸರಿಪಡಿಸು ಕಿರಿಯ ಇಂಜಿನಿಯರ್(ವಿ) ಗೋಣಿಕೊಪ್ಪಲು ರವರಿಗೆ ವರದಿ ನೀಡುವಂತೆಯು ಮತ್ತು ಸರಿಪಡಿಸುವಂತೆಯು ತಿಳಿಸಿದರು. |
| 8 | ನಟೇಶ್<br>ಬೆಸಗೂರು ಗ್ರಾಮ<br>(8762585444) | • 12 ಅಡಿ ಎತ್ತರದಲ್ಲಿ 11 ಕೆ. ವಿ. ಲೈನ್ ಹಾದು ಹೋಗಿರುವ ಬಗ್ಗೆ ಯಾವುದಾದರು ಭಾರ ತುಂಬಿದ ವಾಹನಗಳು ರಸ್ತೆಯಲ್ಲಿ ಸಂಚರಿಸುವಾಗ ತಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವ ಬಗ್ಗೆ ದೂರಿದರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಕೂಡಲೇ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಕ್ರಮವಹಿಸಿ ಸಮಸ್ಯೆಯನ್ನು ಪರಿಹರಿಸುವಂತೆ ಸೂಚಿಸಿದರು. |
| 9 | ರಾಜ<br>ರೈತ ಸಂಘ ಮುಖಂಡ | • ಬೆಸಗೂರು ರಸ್ತೆಯಲ್ಲಿ ಕಂಬಗಳಿದ್ದು ರಸ್ತೆ ಅಗಲೀಕರಣಕ್ಕೆ ತೊಂದರೆ ಯಾಗಿರುವ ಬಗ್ಗೆ ದೂರಿದರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಸ.ಕಾ.ನಿ.ಇಂ(ವಿ) ಗೋಣಿಕೊಪ್ಪಲು ಮತ್ತು ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಸಂಬಂಧಪಟ್ಟ ಪ್ರಾಧಿಕಾರ ರವರಿಗೆ ಮಾತನಾಡಿ ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದರು. |
| 10 | ಚಂದ್ರಶೇಖರ್/<br>ಜಯಕುಮಾರ್<br>ನೆಲ್ಲಿಹುದಿಕೇರಿ ಗ್ರಾಮ<br>(9741531000) | • ವಿದ್ಯುತ್ ತಂತಿಗಳು ಕೆಳಮಟ್ಟದಲ್ಲಿ ಹಾದು ಹೋಗಿರುವುದು ಹಾಗೂ ತೋಟದ ಮಧ್ಯದಲ್ಲಿ ಇರುವುದನ್ನು ಬದಲಾವಣೆ ಮಾಡಿಕೊಡುವಂತೆ ದೂರಿರುತ್ತಾರೆ. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಸಂಬಂದಪಟ್ಟ ಉಪ-ವಿಭಾಗಾಧಿಕಾರಿ ಹಾಗೂ ಶಾಖಾಧಿಕಾರಿಗಳಿಗೆ ಇದರ ಬಗ್ಗೆ ಕ್ರಮ ವಹಿಸಲು ಸೂಚಿಸಿದರು. |

| | | | |
|---|---|---|---|
| 11 | ಅಧ್ಯಕ್ಷರು ಕಲ್ಲಾಯಿ ಜುಮಾ ಮಸೀದಿ ಕಮಿಟಿ (ರಿ), ಚೀನೀವಾಡ ಗ್ರಾಮ, ಬೆಸಗೂರು. | • BGL22380, BGL22622 ವಿದ್ಯುತ್ ಸಂಪರ್ಕವು ಕಡಿತ ಗೊಂಡಿರುವ ಬಗ್ಗೆ ಅದನ್ನು ಪುನರ್ ಸಂಪರ್ಕ ನೀಡಿ ಬಾಕಿಯನ್ನು ಮನ್ನಾ ಮಾಡುವಂತೆ ಕೇಳಿಕೊಂಡರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಹಿರಿಯ ಸಹಾಯಕ ಹಾಗೂ ಕಿರಿಯ ಇಂಜಿನಿಯರ್(ವಿ) ಗೋಣಿಕೊಪ್ಪಲು ರವರಿಗೆ ಸದರಿ ವಿಷಯದ ಬಗ್ಗೆ ನಿಗಮದ ನಿಯಮಾನುಸಾರ ಅಗತ್ಯ ಕ್ರಮವಹಿಸುವಂತೆ ಸೂಚಿಸಿದರು. |
| 12 | ಪೂಣಚ್ಚ, ಮೃತ್ಯುಂಜಯ ದೇವಸ್ಥಾನದ ಅಧ್ಯಕ್ಷರು ಬಾಡಗರಕೇರಿ. (7760081965) | • ಬಿ.ಎಸ್.ಎನ್.ಎಲ್. ಟವರ್ ನಿರ್ಮಾಣ ಮಾಡಲು 21 ಕಂಬ 1 ಟಿ.ಸಿ. ಗೆ ಯೋಜನೆ ರೂಪಿಸಿ ಮೇಲಾಧಿಕಾರಿಗಳಿಗೆ ಕಳುಹಿಸಲಾಗಿತ್ತು ಆದರೆ ಬಿ.ಎಸ್.ಎನ್.ಎಲ್. ರವರು ಹಳೇ ಮಾರ್ಗ ಹಾಗೂ ಪರಿವರ್ತಕದಿಂದ ಟವರ್ ಸ್ಥಾಪಿಸಲು ಪ್ರಯತ್ನ ಪಡುತ್ತಿದ್ದಾರೆ ಎಂದು ದೂರಿದರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಸ್ಥಳ ಪರಿಶೀಲನೆ ನಡೆಸಿ ಇದರ ಪೂರ್ಣ ವರದಿಯನ್ನು ವಿಭಾಗ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದರು. |
| 13 | ಚಂಗಪ್ಪ ಹೊಸೂರು, (9900925190) | • ಹೊಸೂರು ಗ್ರಾಮದ ಅವರ ತೋಟದಲ್ಲಿ ಸರ್ವೆ ನಂಬರ್ 30, 33 ಕಂಬ ಇದೆ ಆದರೆ, ಕಂಬ ನಿಲ್ಲಿಸಿರುವುದಿಲ್ಲ ಆದರೆ ಸದರಿ ಕಂಬವನ್ನು ಕೂಡಲೇ ನಿಲ್ಲಿಸುವಂತೆ ಕೇಳಿಕೊಂಡರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಕಿರಿಯ ಇಂಜಿನಿಯರ್(ವಿ) ಗೋಣಿಕೊಪ್ಪಲು ರವರಿಗೆ ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು. |
| 14 | ಸುಭಾಸ್, ರೈತ ಸಂಘದ ಮುಖಂಡ ಸುಳುಗೋಡು | • ಸ್ಪಿಂಕ್ಲರ್ ಸೀಜನ್ ಬರುವ ಮುಂಚೆ ಜಂಗಲ್ ಕಟ್ಟಿಗ್ ಮಾಡಿ ಲೈನ್ ಕ್ಲಿಯರೆನ್ಸ್ ಇಟ್ಟು ಕೊಳ್ಳುವಂತೆಯು ಮತ್ತು ತೀರಾ ಹಳೆಯದಾದ ಮಾರ್ಗವನ್ನು ಹೊಸ ಮಾರ್ಗವಾಗಿ ಬದಲಾಹಿಸುವಂತೆಯು ಮತ್ತು ಹೊರ ಜಿಲ್ಲೆಗಳಿಂದ ನೇಮಕಾತಿಗೊಂಡ ನಿರ್ವಹಣಾ ಸಿಬ್ಬಂದಿಗಳನ್ನು 5 ವರ್ಷದ ವರೆಗೆ ಕಡ್ಡಾಯವಾಗಿ ಕೊಡಗಿನಲ್ಲಿ ಕೆಲಸ ನಿರ್ವಹಿಸುವಂತೆ ಮಾಡಬೇಕೆಂದು ಕೇಳಿಕೊಂಡರು ಹಾಗೂ ಗೋಣಿಕೊಪ್ಪಲು ಉಪ-ವಿಭಾಗಕ್ಕೆ ಖಾಯಂ ಆಗಿ ಉಪ-ವಿಭಾಗಾಧಿಕಾರಿಗಳನ್ನು ನೇಮಿಸಲು ಶೀಘ್ರವೇ ಕ್ರಮ ಕೈಗೊಳ್ಳಲು ಕೇಳಿಕೊಂಡರು.<br>• ಪೊನ್ನಪ್ಪ ಸಂತೆ ಎಕ್ಸ್‌ಪ್ರೆಸ್ ಲೈನ್ ಮಾಡಲು ರಸ್ತೆ ಮಧ್ಯದಲ್ಲೆ ಕಂಬ ವಿರುತ್ತದೆ ಅದನ್ನು ತೆರವುಗೊಳಿಸಲು ವ್ಯವಸ್ಥೆ ಮಾಡುವಂತೆ ಸೂಚಿಸಿದರು. | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಶಾಖಾಧಿಕಾರಿಗಳಿಗೆ ಇದರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಮತ್ತು ತೀರಾ ಹಳೆಯದಾದ ಮಾರ್ಗಗಳ ಬದಲಾವಣೆಗೆ ನಿಗಮದ ನಿಯಮಾನುಸಾರ ಕ್ರಮ ವಹಿಸಲು ತಿಳಿಸಿರುತ್ತಾರೆ.<br>• ಮುಂದೆ ನಿರ್ವಹಣಾ ಸಿಬ್ಬಂದಿಗಳು ನೇಮಕಾತಿ ಗೊಂಡಾಗ ಅವರಿಂದ ಖಡ್ಡಾಯವಾಗಿ ಜಿಲ್ಲೆಯಲ್ಲಿ ಸೇವೆ ಸಲ್ಲಿಸುವಂತೆ ಮಾಡಲು ಶೀಘ್ರವಾಗಿ ಮೇಲಾಧಿಕಾರಿಗಳಿಗೆ ಪತ್ರ ಬರೆದು ಅಗತ್ಯ ಕ್ರಮ ವಹಿಸುವುದಾಗಿ ತಿಳಿಸಿದರು.<br>• ಸ.ಕಾ.ನಿ.ಇಂ(ವಿ) ಗೋಣಿಕೊಪ್ಪಲು ಮತ್ತು ಶಾಖಾಧಿಕಾರಿ ಬಾಳೆಲೆ ರವರಿಗೆ ಸಂಬಂಧಪಟ್ಟ ಪ್ರಾಧಿಕಾರ ರವರಿಗೆ ಮಾತನಾಡಿ ಇದರ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದರು. |
| 15 | ಮನು ಸೋಮಯ್ಯ ಕೋತೂರು ಗ್ರಾಮ ಕೊಡಗು ಜಿಲ್ಲಾ ರೈತ ಸಂಘದ ಮುಖಂಡ. (9741196699) | • ಎಲ್.ಟಿ.4ಸಿ(1) 10 ಹೆಚ್. ಪಿ. ಮತ್ತು 10 ಹೆಚ್. ಪಿ. ಒಳಗಿರುವ ಸ್ಥಾವರಗಳ ಬಾಕಿ ಮೊತ್ತವನ್ನು ಪಾವತಿಸುವುದಿಲ್ಲ ಈಗ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್ ಮಡಿಕೇರಿ ರವರು ನೀಡಿರುವ ಆದೇಶವನ್ನು ಹಿಂಪಡೆಯಬೇಕು ಮತ್ತು ಸರಕಾರದಿಂದ ಹೊರಡಿಸಿರುವ ಡಿ.ಬಿ.ಟಿ.ಸ್ಕೀಮ್‌ಗೆ ನಮ್ಮ ರೈತರು ಸಹಕಾರ ನೀಡುವುದಿಲ್ಲ ಬಾಕಿ ಪಾವತಿ ಮಾಡದ ರೈತರ 10 ಹೆಚ್.ಪಿ. ಒಳಗಿರುವ ಎಲ್.ಟಿ4ಸಿ(1) ಸ್ಥಾವರದ ವಿದ್ಯುತ್ ನಿಲುಗಡೆ | • ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ಸರಕಾರದ ಆದೇಶದ ಡಿ.ಬಿ.ಟಿ. ಪ್ರತಿಯನ್ನು ರೈತ ಬಾಂಧವರಿ ಓದಿ ತಿಳಿಸುವಂತೆ ಹೇಳಿದರು ಕಾ.ನಿ.ಇಂ(ವಿ) ರವರು ಆದೇಶ ಪ್ರತಿಯನ್ನು ಓದಿದಾಗ ರೈತರು ಒಕ್ಕೊರಳಿನಿಂದ ಡಿ.ಬಿ.ಟಿ. ಸ್ಕೀಮ್ ಅನ್ನು ವಿರೋದಿಸಿದರು. ತದ ನಂತರ ಅಧೀಕ್ಷಕ ಇಂಜಿನಿಯರ್(ವಿ) ಸೆಸ್ಕ್ ಚಾ-ಕೊ ವೃತ್ತ ಮೈಸೂರು ರವರು ಮಾತನಾಡಿ ಸದರಿ ವಿಷಯದ ಬಗ್ಗೆ ಮೇಲಾಧಿಕಾರಿಳಿಗೆ ತಮ್ಮ ಮನವಿಯನ್ನು ತಲುಪಿಸಲಾಗುವುದು ನಾವು |

| | | | |
|---|---|---|---|
| | | ಗೊಳಿಸಲು ನಿಮ್ಮ ನೌಕರರು ನಮ್ಮಲ್ಲಿಗೆ ಬರಬಾರದು ಬರುವುದಾದರೆ ನಾವು ರಾಜ್ಯವ್ಯಾಪ್ತಿ ಉಗ್ರ ಹೋರಾಟಮಾಡಿ ಸೆಸ್ಕ್ ಕಛೇರಿಗೆ ಬೀಗ ಜಡಿಯಲಾಗುವುದು ಇದರಲ್ಲಿ ಆಗುವ ಕಾನೂನು ಅವ್ಯವಸ್ಥೆಗೆ ನೀವೇ ನೇರ ಜವಬ್ದಾರರು ಪೋಲೀಸ್ ಇಲಾಖೆಗೆ ಇದರ ಬಗ್ಗೆ ಸಭೆಯಲ್ಲಿ ಎಚ್ಚರಿಕೆಯನ್ನು ನೀಡಿ ಮೇಲಾಧಿಕಾರಿಗಳಿಗೆ ಸದರಿ ವಿಷಯದ ಬಗ್ಗೆ ಗಮನಕ್ಕೆ ತರುವಂತೆ ಹೇಳಿರುತ್ತಾರೆ.<br>ಮತ್ತು 10 ಹೆಚ್.ಪಿ. ಎಲ್.ಟಿ.4ಸಿ(1) ಮತ್ತು 10 ಹೆಚ್.ಪಿ. ಒಳಗೆ ಇರುವ ಸ್ಥಾವರಗಳ ಬಾಕಿಯನ್ನು ಮನ್ನಾ ಮಾಡಲು ಸರಕಾರದ ಕಡೆಯಿಂದ ಅನುಮೋದನೆ ಪಡೆಯಲಾಗುವುದು ಅಲ್ಲಿಯ ವರೆಗೆ ಯಾವುದೇ ಐ.ಪಿ. ಸ್ಥಾವರವನ್ನು ವಿದ್ಯುತ್ ನಿಲುಗಡೆ ಮಾಡದಂತೆ ಶಾಖಾಧಿಕಾರಿಗಳಿಗೆ ಎಚ್ಚರಿಕೆಯನ್ನು ನೀಡಿರುತ್ತಾರೆ. | ಸರಕಾರದ ಆದೇಶವನ್ನು ಕಾರ್ಯಗತ ಗೊಳಿಸುವ ಕೆಲಸ ಮಾತ್ರ ಮಾಡಲು ಸಾಧ್ಯವೆಂದು ನಿಗಮದ ನಿಯಮದ ಹೊರಗಿರುವ ವಿಷಯಗಳನ್ನು ನಾವು ಸರಕಾರಕ್ಕೆ ನಮ್ಮ ಮೇಲಾಧಿಕಾರಿಗಳ ಮುಖಾಂತರ ತಿಳಿಸಲಾಗುವುದು ಎಂದು ಹೇಳಿರುತ್ತಾರೆ. |

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ ಮಡಿಕೇರಿ ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಗೋಣಿಕೊಪ್ಪ ಉಪವಿಭಾಗ ರವರ ಮಾಹಿತಿಗಾಗಿ. ಹಾಗೂ ದೂರುಗಳ ಇತ್ಯಾರ್ಥ ಪಡಿಸಲು ಅವಶ್ಯಕ ಕ್ರಮವಹಿಸಲು ತಿಳಿಸಲಾಗಿದೆ.
7. ಹಿಆಸ/ಪ್ರಕ/ಕಡತ.